ಅವೆಲ್ಲ ಹೇಳಿಕೊಡುತ್ತಾರೆ. ಅಮ್ಮಣ್ಣಿ ತೋಟಕ್ಕೆ ಬಂದಾಗಲೆಲ್ಲಾ ತನ್ನನ್ನು ಕೂರಿಸಿಕೊಂಡು ಹೇಳಿ ಕೊಡುತ್ತಾರೆ. ನನಗೆ ಕಂಠ ಪಾಠವಾಗಿದೆ. ಅಮ್ಮಣ್ಣಿ ಮುಖದಲ್ಲಿ ದೈವೀಕಳೆ. ಸದಾ ಹಸನ್ಮುಖಿ. ಅಮ್ಮಣ್ಣಿ ನಕ್ಕರೆ ಅವರ ಹಲ್ಲುಗಳಲ್ಲಿ ಹೊಳೆಯಾಗಿ ಹಾಲು ಹರಿಯುತ್ತೆ. ಅಮ್ಮಣ್ಣಿ ನನ್ನ ಅಮ್ಮನಿಗಿಂತಲೂ ವಯಸ್ಸಿನಲ್ಲಿ ಚಿಕ್ಕವರು. ಸ್ವಾಮಿಯೋರೂ ನನ್ನ ಅಪ್ಪನಿಗಿಂತಲೂ ಚಿಕ್ಕವರು. ಅವರ ಮನೆಯಲ್ಲಿ ಮಡಿ ಆಚಾರ ಜಾಸ್ತಿ. ಸ್ವಾಮಿ ಪ್ರವಚನ ಮಾಡುತ್ತಾರೆ.

ನನಗೆ ಮಯೂರಿ ಅಂತ ಹೆಸರಿಟ್ಟಿದ್ದೇ ಅಮ್ಮಣ್ಣಿ. ನಮ್ಮ ಜನಗಳಲ್ಲಿ ಅಂತಹ ಹೆಸರು ಇಡೋಲ್ಲ. ಅಷ್ಟು ದೊಡ್ಡವರು ನಾವಲ್ಲ. ನನ್ನ ಹೆಸರು ಮಯೂರಿ ಆದರೂ ಊರಿನಲ್ಲಿ ಯಾರೂ ತನ್ನನ್ನು ಮಯೂರಿ ಅಂತ ಹೆಸರು ಹಿಡಿದು ಕರೆಯುವುದಿಲ್ಲ. ಎಲ್ಲಾರೂ ಕರೆಯುವುದು ಏ ಮಯಮ್ಮ, ಏ ಮಯೀ ಅಂತಲೇ. ಮಯೂರಿ ಅಂತ ಕರೆಯುವುದು ಇಬ್ಬರೇ. ಅಮ್ಮಣ್ಣಿ ಮತ್ತೆ ಟೀಚರುಗಳು. ನನ್ನ ಅಮ್ಮ ಅಪ್ಪ ಬೀಡಿ ಸೇದುವುದಿಲ್ಲ. ಸಾರಾಯಿ ಕುಡಿಯುವುದಿಲ್ಲ. ಅಮ್ಮಣ್ಣಿ, ಸ್ವಾಮಿಯೋರ ಮುಂದೆ ಹಾಗೆಂದು ಪ್ರಮಾಣ ಮಾಡಿದ್ದಾರೆ. ಊರ ಹೊರಗಿನ ಗುಡಿಸಿಲುಗಳಲ್ಲಿರುವ ನಮ್ಮವರ ಗಂಡಸರೂ ಹೆಂಗಸರೂ ಎಲ್ಲಾರೂ ನಾಟಿ ಸಾರಾಯಿ ಕುಡಿಯುತ್ತಾರೆ, ಹೆಂಗಸರು ಕೆಲವರು ಬಹಿರಂಗವಾಗಿ ಕೆಲವರು ಕದ್ದು ಮುಚ್ಚಿ, ಕೆಲವರು ಅಮಾಯಕತೆಯಿಂದ, ಕೆಲವರನ್ನು ಬಿಟ್ಟು. ಆದರೆ ಹೆಂಗಸರು ಯಾರು ಬೀಡಿ ಸೇದುವುದಿಲ್ಲ.

ನನಗೆ ಓದಲು ಪ್ರೇರೇಪಿಸಿದ್ದೂ, ಆಸಕ್ತಿ ಹುಟ್ಟಿಸಿದ್ದೂ ಸ್ವಾಮಿಯೋರು, ಅಮ್ಮಣ್ಣಿಯವರೇ. ಟುವೆಲ್ತ್ ಸ್ಟ್ಯಾಂಡರ್ಡ್ ಪಾಸಾದ ಮೇಲೆ ತಾನು ದನದ ಡಾಕ್ಟರೇ ಆಗಬೇಕು ಅಂತ ಹಠ ಹಿಡಿದಾಗ ಅಮ್ಮಣ್ಣಿ, ಸ್ವಾಮಿ ಇಬ್ಬರೂ ಜೊತೆಯಲ್ಲಿ ಬಂದು ವೆಟರ್ನರಿ ಕಾಲೇಜಿಗೆ ಸೇರಿಸುತ್ತಾರೆ. ಕಾಲೇಜು ಫೀಜು ಕಟ್ಟುತ್ತಾರೆ. ಹಾಸ್ಟೆಲ್ ಫೀಜು ಕಟ್ಟುತ್ತಾರೆ. ನನಗೆ ಬಟ್ಟೆ ಹೊಲಿಸುತ್ತಾರೆ. ಪುಸ್ತಕ ಕೊಡಿಸುತ್ತಾರೆ. ಖರ್ಚಿಗೆ ಹಣ ಕೊಡುತ್ತಾರೆ. ನನಗೆ ಅವರ ಮೇಲೆ ಅಪಾರ ಗೌರವ. ನಮ್ಮೂರ ಎಲ್ಲಾರಿಗೂ ಅಷ್ಟೇ. ಸ್ವಾಮಿಯೋರ ತಂದೆ ಕಾಲದಲ್ಲೇ ತಮ್ಮ ಜಮೀನು ಸ್ವಲ್ಪ ಸ್ವಲ್ಪ ಊರಿನ ರೈತರಿಗೆ ಹಂಚಿ ಬಿಟ್ಟರು. ಹಾಗೆ ಬಂದಿದ್ದೇ ನಮ್ಮ ಹತ್ತಿರ ಇರುವ ಇಪ್ಪತ್ತು ಕುಂಟೆ ಹೊಲ ಕೂಡ. ಎಲ್ಲರಿಗೂ ಊಟ ಹಾಕುವ ಮನೆ ಅದು. ನನ್ನ ಹಳ್ಳಿ ಮಂದಿ ಬಹಳ ಒಳ್ಳೆಯವರು. ಆದರೆ ಸ್ವಲ್ಪ ಒರಟು. ನನಗೆ ಹಿಡಿಸಿದ್ದು ಅವರ ಹಳ್ಳಿತನ. ಅವರದು ಕೊಡುವ ಕೈಗಳೇ ಹೊರತು ಚಾಚುವ ಕೈಗಳಲ್ಲ. ಋಣ ಅಂದರೆ ಭಯ. ಒಬ್ಬರ ಋಣ ಇಟ್ಟುಕೊಳ್ಳುವುದಿಲ್ಲ. ತಕೊಂಡಿದ್ದನ್ನು ವಾಪಸು ಹಿಂದಿರುಗಿಸಿ ಬಿಡುತ್ತಾರೆ. ಊರಿಗೆ, ಮನೆಗೆ ಯಾರೇ ಬರಲಿ ಅವರ ಬಾಯಿಂದ ಬರುವ ಮಾತು 'ಹಾಲು ಕುಡಿದುಕೊಂಡು ಹೋಗಿ' ಅವರ ಮನೆಯಲ್ಲಿ ಹಸು ಅರ್ಧ ಲೀಟರು, ಒಂದು ಲೀಟರು ಹಾಲು ಕರೆಯಲಿ, ನೀರು ಹಾಲಾದರೂ ಕೊಟ್ಟು ಕಳುಹಿಸುತ್ತಾರೆ. ಹಾಲು ಅಂದರೆ ಗೌರವ, ಭಕ್ತಿ. ಒಂದು ತೊಟ್ಟೂ ಹಾಲು ನೆಲಕ್ಕೆ ಬೀಳಲು ಬಿಡುವುದಿಲ್ಲ. ಚೆಲ್ಲಿದ ಹಾಲನ್ನು ಕಾಲಿನಿಂದ ತುಳಿಯುವುದಿಲ್ಲ. ಹಣ ಕಾಸು ಮತ್ಯಾವುದೇ ವ್ಯವಹಾರ ಮಾಡಬೇಕಾದರೂ ಲೋಟ ಹಾಲಿನ ಮೇಲೆ ಕೈಯಿಟ್ಟು ಪ್ರಮಾಣ ಮಾಡುತ್ತಾರೆ. ನಮ್ಮೂರವರ ಪಾಲಿಗೆ ಹಾಲು ಅಂದರೆ ಲಕ್ಷ್ಮಿ. ಆದರೆ ಎಲ್ಲಾರೂ ನಮ್ಮ ಊರಿನ ಜನರನ್ನು ನಾಗರಿಕತೆ ಇಲ್ಲದವರು ಅನ್ನುತ್ತಾರೆ. ಓದು ಬರಹ ಇಲ್ಲ, ಬಯಲು ಸೀಮೆ. ಸರಿಯಾಗಿ ಮಳೆ ಇಲ್ಲ. ಆದ್ದರಿಂದ ಸರಿಯಾಗಿ ಬೇಸಾಯ ಇಲ್ಲ. ನಮ್ಮೂರಿನವರಿಗೆ ಕೇಳಿಕೆ ಆಡುವುದು ಅಂದರೆ ಬಹಳ ಇಷ್ಟ. ವರ್ಷ ವರ್ಷ ಸತ್ಯಹರಿಶ್ಚಂದ್ರ, ಭಕ್ತ ಪ್ರಹ್ಲಾದ, ಪಾಂಡವರ ವನವಾಸ, ಲಂಕಾದಹನ.. ಹೀಗೆ ಪೌರಾಣಿಕ ತೆಲುಗು ಕೇಳಿಕೆ ಆಡುತ್ತಾರೆ. ತೆಲುಗು ಸಿನಿಮಾ ನೋಡುವ ಹುಚ್ಚು. ಅದಕ್ಕಾಗಿ ಪಕ್ಕದ ಆಂಧ್ರಕ್ಕೆ, ಟೌನಿಗೆ ಹೊರಟು ಬಿಡುತ್ತಾರೆ. ಬಸ್ಸಿನಲ್ಲೋ ಮೋಟರು ಬೈಕಿನಲ್ಲೋ ಇಲ್ಲಾ ನಡಕೊಂಡೋ! ಇಪ್ಪತ್ತು ಕಿಲೋ ಮೀಟರು.

ನಮ್ಮೂರಲ್ಲಿ ಯಾರೂ ಕಾಲೇಜು ಹತ್ತಿದವರಲ್ಲ. ನಾನೇ ಮೊದಲಿಗಳು. ನನ್ನ ನಂತರ ನಮ್ಮೂರು, ಅಕ್ಕಪಕ್ಕ ಊರುಗಳ ಹುಡುಗರೂ ಹುಡುಗಿಯರೂ ಕಾಲೇಜು ಸೇರಿದ್ದಾರೆ. ತಾನು ಕಾಲೇಜು ಸೇರಿದಾಗ ಮೊದಲು ಖುಷಿ ಪಟ್ಟವರು, ಕುಣಿದಾಡಿದವರು ನಮ್ಮೂರಿನವರು. ಕಾಲೇಜು ಸೇರಿದ ಮೇಲೆ ನನಗೆ ಎಲ್ಲಾ ಹೊಸ ಹೊಸ ಅನುಭವ. ಕಾಲೇಜಿನಲ್ಲಿ, ಹಾಸ್ಟೆಲ್‌ನಲ್ಲಿ ನಾನು ಬೇರೆ ಅನ್ನುವ ಅನುಭವ ಆಗಲಿಲ್ಲ. ನನ್ನ ಡೇ ಸ್ಕಾಲರ್ ಕ್ಲಾಸ್ ಮೇಟ್ಸ್, ಬ್ರಾಹ್ಮಣ ಹುಡುಗಿಯರೂ ಸೇರಿದಂತೆ ಇತರ ಎಲ್ಲರ ಮನೆಗಳಿಗೂ ಹೋಗಿದ್ದೇನೆ. ಅವರ ಅಡುಗೆ ಮನೆಯಲ್ಲೂ ಓಡಾಡಿದ್ದೇನೆ. ಜೊತೆ ಜೊತೆಗೆ ಇನ್ನೂ ನಾನೆಣಿಸದ ಅನುಭವಗಳೂ ಆಗದೆ ಇಲ್ಲ. ಕಾಲೇಜುಗಳು ಜ್ಞಾನದೇಗುಲಗಳಷ್ಟೇ ಅಲ್ಲ, ಅಜ್ಞಾನದ ಅಗ್ನಿಕುಂಡಗಳೂ ಕೂಡಾ ಎಂಬ ಸತ್ಯದ ಅರಿವಾಯಿತು. ನೆನೆಸಿಕೊಂಡರೆ ಭಯ ಆಗುತ್ತೆ. ನನ್ನ ಶರೀರದ ಹಾಲ್ರಸ ನಾಳಗಳಲ್ಲಿ ಹೊಳೆಯಾಗಿ ಹರಿಯುತ್ತಿರುವ ಹಾಲಿಗೆ ದ್ವೇಷದ ಹಾಲಾಹಲ




**ಕನಸು**

ಮಿದುಳೆಂಬ
ಪರದೆಯ ಮೇಲೆ
ಪ್ರದರ್ಶಿಸಲ್ಪಡುವ
ಕಲ್ಪನೆಗಳ
ಚಲನಚಿತ್ರ

■ ನರಹರಿ ಬಿ. ಕಾರವಾರ

ಬೆರೆಸುವ, ನನ್ನ ಮನಸ್ಸು ದೇಹದೊಳಗೆ ದ್ವೇಷದ ಬೀಜ ಬಿತ್ತುವ ಸಂಭವಗಳನ್ನೂ ಎಚ್ಚರಿಕೆಯಿಂದ ಎದುರಿಸುತ್ತೇನೆ. ನನ್ನ ಮನಸ್ಸು ಮಲಿನವಾಗದಂತೆ ರಾತ್ರಿ ಹಗಲೂ ಕಾಯುತ್ತೇನೆ, ದನ ಕಾಯುವಂತೆ. ನನ್ನ ಮನಸ್ಸು ಅಪ್ಪಟ ಹಾಲು. ನಾನು ನಾನಾಗಿಯೇ ಇರಲು ಇಷ್ಟಪಡುತ್ತೇನೆ. ದ್ವೇಷ ನನ್ನ ಪ್ರಹಾರ ಪರಿಕರವಲ್ಲ. ನನ್ನ ಚಿಂತನಗಳೇ ಬೇರೆ. ನಾನು ಯಾರನ್ನೂ ದ್ವೇಷಿಸುವುದಿಲ್ಲ. ನಾನು ಎಲ್ಲರನ್ನೂ ಪ್ರೀತಿಸುತ್ತೇನೆ. ನಾನು ಪ್ರೀತಿಸುವುದು ಆತ್ಮೀಯತೆಯನ್ನು. ನಾನು ಪ್ರೀತಿಸುವ ಸಮಾಜ ನನಗೆ ಬೇಕು. ನನ್ನನ್ನು ಪ್ರೀತಿಸುವ ಸಮಾಜ ನನಗೆ ಬೇಕು. ಹಳ್ಳಿಯಿಂದ ಬಂದಾಗ ಹಾಲಾಗಿ ಬಂದೆ. ಹಳ್ಳಿಗೆ ವಾಪಸು ಹೋಗುವಾಗಲೂ ಹಾಲಾಗಿಯೇ ಹೋಗುತ್ತೇನೆ. 'ಓದು... ಚೆನ್ನಾಗಿ ಓದು... ಮೇಲಕ್ಕೆ ಬಾ... ಅಹಂಕಾರ, ಅಸೂಯೆ, ಅಸಹನೆ, ಅಲ್ಪತನ ಮನಸ್ಸು ಮೈಯೊಳಗೆ ಬಿಟ್ಟುಕೋಬೇಡ... ಬದುಕಿಗೊಂದು ಸರಿಯಾದ ಅರ್ಥ ರೂಪಿಸಿಕೋ..' ಕಾಲೇಜು ಸೇರಿದಾಗ ಅಮ್ಮಣ್ಣಿ ಹೇಳಿದ ಬುದ್ಧಿಮಾತು ಮನಸ್ಸಿನಲ್ಲಿ ರಿಂಗಣಿಸುತ್ತದೆ.

ಎಲ್ಲವೂ ಬದಲಾಗಿದೆ! ಇದು ಕಾಲ ಚಕ್ರದ ಮಹಿಮೆಯೋ! ವಿದ್ಯೆಯ ಶಕ್ತಿಯೋ! ಇದು ಏನೇ ಇರಲಿ. ಇದೆಲ್ಲಕ್ಕಿಂತಲೂ ಮಿಗಿಲಾಗಿ, ನನಗೆ ರೋಮಾಂಚಕ ಅನುಭವ ಆಗಿದ್ದು, ಇಷ್ಟು ದಿನ ಗುಟ್ಟಾಗಿ ಇಟ್ಟಿರುವುದು ಒಂದಿದೆ. ನನ್ನ ಅಮ್ಮ ಅಪ್ಪಗೂ ಹೇಳಿಲ್ಲ. ಊರಿನವರಿಗೂ ತಿಳಿಸಿಲ್ಲ. ವೆಟರ್ನರಿ ಕಾಲೇಜಿಗೆ ಸೇರಲು ಟೆಸ್ಟ್ ಬರೆಯಲು ಬಂದಾಗ, ಟೆಸ್ಟ್ ಮುಗಿಸಿ ಸಂಜೆ ಊರಿಗೆ ಹೋಗಬೇಕು ಎನ್ನುವಾಗ ಸ್ಟ್ರೈಕು, ಗಲಾಟೆ, ಬೆಂಗಳೂರು, ಕರ್ನಾಟಕ ಬಂದ್. ಆ ರಾತ್ರಿ ಬೆಂಗಳೂರಿನಲ್ಲೇ ಉಳಿದುಕೊಳ್ಳಬೇಕಾಯಿತು. ಹೊಟೇಲಿನಲ್ಲಿ ರೂಮ್ ಮಾಡಿದರು. ಡಬಲ್ ಬೆಡ್ ರೂಮ್. ಸ್ವಾಮಿಯೋರು ಸೋಫಾ ಮೇಲೆ ಮಲಗುತ್ತಾರೆ. ತಾನು ದೂರ ಬಾಗಿಲ ಬಳಿ ಮುದುಡಿ ನಿಲ್ಲುತ್ತೇನೆ. ಅಮ್ಮಣ್ಣಿ ಗದರಿಸುತ್ತ 'ಬಾರೇ ಬಂದು ಮಲಗಿಕೊಳ್ಳೇ' ಅಂತ ಎಳೆದು ತಮ್ಮ ಹಾಸಿಗೆಯ ಮೇಲೆ ತಮ್ಮ ಪಕ್ಕದಲ್ಲೇ ಮಲಗಿಸಿಕೊಳ್ಳುತ್ತಾರೆ! ಅವರ ಕೈ ಸ್ಪರ್ಶ ನನ್ನ ಮೈ ನಡುಗಿಸುತ್ತದೆ. ರೋಮಾಂಚನವಾಗುತ್ತದೆ! ನನ್ನ ಅಮ್ಮನ ಕೈ ಸ್ಪರ್ಶಕ್ಕಿಂತಲೂ ನೂರು ಪಟ್ಟು ಪುಳಕಿತವಾಗಿರುತ್ತದೆ, ಅಮ್ಮಣ್ಣಿಯ ಕೈ ಸ್ಪರ್ಶ! ಅವರ ಆತ್ಮೀಯತೆಗೆ ಜಾತಿ ಅಡ್ಡ ಬರಲಿಲ್ಲ. ನನ್ನ ಕಣ್ಣು ನೀರಾಡುತ್ತದೆ. ಮನಸ್ಸಿನೊಳಗೇ ನಮಸ್ಕಾರ ಮಾಡುತ್ತೇನೆ ಆ ಮಹಾ ತಾಯಿಗೆ. ಹಳ್ಳಿಗೆ ಬಂದರೆ ಮತ್ತೆ ದೂರ ದೂರ! ಸಮಾಜ , ಕಟ್ಟುಪಾಡುಗಳು, ಭಯ, ಅಧೈರ್ಯ, ವ್ಯಕ್ತಿಗಳನ್ನು ಕಟ್ಟಿ ಹಾಕಿವೆ, ಆತ್ಮೀಯತೆಯನ್ನಲ್ಲ. ಎಲ್ಲರೂ ಪರಿಸ್ಥಿತಿಯ ಪಾಶ ಬಂಧಿತರೆ ಎಂಬ ಸತ್ಯ ಅರಿವಾಗುತ್ತದೆ.

ಡಾಕ್ಟರಾದ ಮೇಲೆ ತಾಜೂ ನಾನೂ ಇಬ್ಬರೂ ನನ್ನ ತಾಲ್ಲೂಕಿನಲ್ಲೇ ಕೆಲಸಕ್ಕೆ ಸೇರಿಕೊಳ್ಳುತ್ತೇವೆ. ಶಿವಮೊಗ್ಗದ ಕಡೆ ಹುದ್ದೆಗಳು ಖಾಲಿ ಇಲ್ಲದ ಕಾರಣ ಅವಳೂ ಈ ಕಡೆಯೇ ಕೆಲಸ ಆರಿಸಿಕೊಳ್ಳಬೇಕಾಯಿತು. ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು. ಅಕ್ಕಪಕ್ಕದ